ತಾರೀಖು 21ನೆ ಡಿಸೆಂಬರ 1906.

ನಂ. 5402—ಮೆಡಿಕಲ್. 138-06—2, 1906ನೆ ಇಸವಿಯ ಅಕ್ಟೋಬರ 10ನೆ ತಾರೀಖಿನ 2825—ಮೆಡಿಕಲ್. 12-06—3ನೆ ನಂಬರ ಇಸ್ತಿಹಾರ್ನಾಮೆಯಿಂದ ಸಿವಿಲ್ ಸರ್ಜನ್‌ಗಳ 2ನೆ ತರಗತಿಗೆ ಬಡತಿ ಮಾಡಲ್ಪಟ್ಟ ಮಿಸ್॥ ಆರ್. ಗೋವಿಂದ ರಾಜಲು, ಎಂ. ಡಿ. ಯವರಿಗೆ ಬದಲಾಗಿ ಮೊದಲನೆ ತರಗತಿಯ ಅಸಿಸ್ಟೆಂಟ್ ಸರ್ಜನ್ ಮಿ॥ ಡಬ್ಲ್ಯೂ. ಶ್ರೀನಿವಾಸೈಯ್ಯಂಗಾರ್ಯವರನ್ನು ಮೂರನೆ ತರಗತಿಯ ಸಿವಿಲ್ ಸರ್ಜರಾಗಿ ಬದಲಿ ನೋಡುವಂತೆ ಪ್ರೊಕರರ್ಯಾಡಿ ಇದೆ.

ತಾರೀಖು 28ನೆ ಡಿಸೆಂಬರ 1906.

ನಂ. 5604—ಮೆಡಿಕಲ್. 195-06—2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣಕ್ಕನುಗುಣವಾಗಿ ಬೆಂಗಳೂರು ವೆಟರ್ನರಿ ಆಸ್ಪತ್ರೆಯ ಚಾರ್ಜಿನಲ್ಲಿರುವ ಮಿಸ್॥ ಆರ್. ಗೋವಿಂದರಾಜಲು, ಎಂ. ಡಿ. ಯವರಿಗೆ 1907ನೆ ಇಸವಿಯ ಜನವರಿ 3ನೆ ತಾರೀಖಿನಿಂದ 7 ದಿನವಸಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತದೆ.

ತಾರೀಖು 31ನೆ ಡಿಸೆಂಬರ 1906.

ನಂ. ಜೆ. 1832—ಕೋರ್ಟ್ಸ್. 167-06—1, ಬೆಂಗಳೂರು ಸಿಟಿ ಅಸಿಸ್ಟೆಂಟ್ ಕಮಿಷನರ್ ಮತ್ತು ಮೊದಲನೆ ತರಗತಿಯ ಮಾಜಿಸ್ಟ್ರೇಟರಾದ ಮಿ॥ ಸಿ. ರಾಮರಾಯರು ಬೆಂಗಳೂರು ಡಿಸ್ಟ್ರಿಕ್ಟ್ ಜನರಲ್ ಡ್ಯೂಟಿ ಯಾ ಸಾಮಾನ್ಯ ಕೆಲಸಕ್ಕೆ ಹಾಕಲ್ಪಟ್ಟು, ಕಿವಮೊಗ್ಗಾ ಡಿಸ್ಟ್ರಿಕ್ಟಿಗೆ ಹಂಗಾಮಿಯಾಗಿ ವರ್ಗಾಯಿಸಲ್ಪಟ್ಟಿರುವ ಮಿ॥ ಪಿ. ಶ್ರೀನಿವಾಸರಾಯರಿಗೆ ಬದಲಾಗಿ ಬೆಂಗಳೂರು ಸಬ್ ಡಿವಿಜ಼ ಚಾರ್ಜಿನಲ್ಲಿರುವರು.

ಬೆಂಗಳೂರು ಸೆಂಟ್ರಲ್ ಜೈಲಿನ ಸೂಪರಿಟೆಂಡೆಂಟರಾದ ಮಿ॥ ಜಿ. ಹ್ಯೂಮ್ ರೈಟ್‌ರವರು, ರಜಾದಿಂದ ವಾಪಸು ಬಂದ ತರುವಾಯ, "ಬೆಂಗಳೂರು ಸಿಟಿ ಮಾಜಿಸ್ಟ್ರೇಟ್" ಎಂಬ ಹೆಸರಿನಿಂದ, ಬೆಂಗಳೂರು ಸಿಟಿಯ ಅಸಿಸ್ಟೆಂಟ್ ಕಮಿಷನರ್ ಮತ್ತು ಮೊದಲನೆ ತರಗತಿಯ ಮಾಜಿಸ್ಟ್ರೇಟರ ಕಚೇರಿಯ ಚಾರ್ಜಿನಲ್ಲಿ ಇಡಲ್ಪಡುವರು. ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೆ ಪ್ರಕರಣದ ವೇರೆಗೆ ಇವರಿಗೆ ಮೊದಲನೆ ತರಗತಿಯ ಮಾಜಿಸ್ಟ್ರೇಟನ ಅಧಿಕಾರಗಳನ್ನು ಕೊಟ್ಟಿರುತ್ತದೆ.

ತಾರೀಖು 3ನೆ ಜನವರಿ 1907.

ನಂ. 5996—ಮೆಡಿ. 198-06—3, ಸ್ಯ॥ 1906ನೆ ಇಸವಿಯ ಡಿಸೆಂಬರು 20ನೆ ತಾರೀಖಿನ ಪೂರ್ವಾಹ್ನದಲ್ಲಿ ಮೈಸೂರು ಸರ್ಕಾರದ ಆಫೀಷಿಯೇಟಿಂಗ್ ಸೀನಿಯರ್ ಸರ್ಜ್ಜ ಮತ್ತು ಸ್ಯಾನಿಟರಿ ಕಮಿಷನರ ಕೆಲಸಗಳ ಛಾರ್ಜನ್ನು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಟೆಂಡೆಂಟರ ಕೆಲಸ ನೋಡುತ್ತಿರುವ ಮಿ॥ ಪಿ. ಎಸ್. ಅಚ್ಯುತರಾಯರು ವಹಿಸಿದರು.

ತಾರೀಖು 3ನೆ ಜನವರಿ 1907.

ನಂ. 6000—ಮೆಡಿ. 201-06—2, ಬೆಂಗಳೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಲ್ ಆಸ್ಪತ್ರೆಯ ಛಾರ್ಜಿನಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜ್ಜ ಮೆ॥ ಜೆ. ವಿ. ಮಾಸ್ಕರೆನ್‌ಹಾಸ್ ರವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 177ನೆ ನಿಬಂಧನೆಯಮೇರೆ 1906ನೆ ಇಸವಿಯ ಅಕ್ಟೋಬರ 18ನೆ ತಾರೀಖಿನಿಂದ 8 ದಿನಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿತು.

ತಾರೀಖು 5ನೆ ಜನವರಿ 1907.

ನಂ. ಜೆ. 1888—ಕೋ. 167-06—3, ಸ್ಯ॥ 1904ನೆ ಇಸವಿಯ 2ನೆ ನಂಬರ್ ರೆಗ್ಯುಲೇಷನ್ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 37ನೆ ಪ್ರಕರಣಾನುಸಾರವಾಗಿ, ಬೆಂಗಳೂರು ಸಿಟಿ ಮಾಜಿಸ್ಟ್ರೇಟ್ ಮಿ॥ ಜಿ. ಹ್ಯೂಂ ರೈಟ್ ಯವರಿಗೆ, ಮೊದಲನೆ ತರಗತಿಯ ಮಾಜಿಸ್ಟ್ರೇಟಿಗೆ ಸರ್ಕಾರದವರು ಕೊಡಬಹುದಾದ ಹೆಚ್ಚಿಗೆ ಅಧಿಕಾರಗಳೆಂದು 4ನೆ ಷೆಡ್ಯೂಲಿನಲ್ಲಿ ವಿವರಿಸಿರುವ ಈ ಕೆಳಗಿನ ಅಧಿಕಾರಗಳನ್ನು ಕೊಟ್ಟಿದೆ.

(1) ಒಳ್ಳೆಯ ನಡತೆಯ ಬಗ್ಗೆ ಜಾಮೀನು ಕೊಡಬೇಕೆಂದು ಕೇಳುವ ಅಧಿಕಾರ, ಪ್ರ. 110.
(2) ಸ್ಥಳೀಯ ಹೇಸಿಗೆಗಳನ್ನು ಕುರಿತು ಹುಕುಂ ಮಾಡುವ ಅಧಿಕಾರ, ಪ್ರ. 133.
(3) ಹೇಸಿಗೆಗಳನ್ನು ಪುನಃ ಮಾಡದಂತೆ ನಿಷೇಧಿಸಿ ಹುಕುಂ ಮಾಡುವ ಅಧಿಕಾರ, ಪ್ರ. 143.
(4) 144ನೆ ಪ್ರಕರಣದಮೇರೆ ಹುಕುಂ ಮಾಡುವ ಅಧಿಕಾರ.
(5) ಆಕಸ್ಮಿಕ ಪುರಣಗಳನ್ನು ಕುರಿತು ತನಿಖೆ ಮಾಡುವ ಅಧಿಕಾರ, ಪ್ರ. 174.
(6) ಮಾಜಿಸ್ಟ್ರೇಟಿನ ಸ್ಥಳೀಯ ಅಧಿಕಾರ ಸರಹದ್ದಿನ ಹೊರಗೆ ತಪ್ಪಿತ ನಡಸಿದವನು ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಇದ್ದರೆ ಅವನಿಗೆ ಪ್ರೋಸೆಸ್ ಕೊಡುವ ಅಧಿಕಾರ, ಪ್ರ. 186.
(7) ಫಿರ್ಯಾದುಗಳ ಮೇಲೆ ತಪ್ಪಿತಗಳನ್ನು ತನಿಖೆ ಮಾಡುವ ಅಧಿಕಾರ, ಪ್ರ. 190.
(8) ಪೊಲೀಸಿನವರ ರಿಪೋರ್ಟುಗಳ ಮೇಲೆ ತಪ್ಪಿತಗಳನ್ನು ತನಿಖೆಮಾಡುವ ಅಧಿಕಾರ, ಪ್ರ. 190.
(9) ವರ್ತಮಾನದಮೇಲೆ ತಪ್ಪಿತಗಳನ್ನು ತನಿಖೆಮಾಡುವ ಅಧಿಕಾರ, ಪ್ರ. 190.
(10) ಪೂಟಾಗಿ ದರ್ಯಾಫ್ತ ಮಾಡುವ ಅಧಿಕಾರ, ಪ್ರ. 260.
(11) ಜೋರಿಮಾಲೆಂದು ಬೇಗೈರೆ ಹೇಳಲ್ಪಟ್ಟ ಅಥವಾ ಗುಮಾನಿರುವ ಸ್ವತ್ತನ್ನು ವಿಕ್ರಯಿಸುವ ಅಧಿಕಾರ, ಪ್ರ. 524.
(12) ಪ್ರಥಮ ತಪ್ಪಿತಸ್ಥರ ವಿಷಯದಲ್ಲಿ ಹುಕುಂಮಾಡುವ ಅಧಿಕಾರ, ಪ್ರ. 562.
(13) ಬಿಡುಗಡೆಮಾಡಲ್ಪಟ್ಟ ಕೈದಿಗಳ ವಾಸಸ್ಥಾನವನ್ನು ಪ್ರಕಟಿಸುವ ಬಗ್ಗೆ ಹುಕುಂ ಕೊಡುವ ಅಧಿಕಾರ, ಪ್ರ. 565.

ತಾರೀಖು 9ನೆ ಜನವರಿ 1907.

ನಂ. ಜೆ. 1918—ಟ್ರಜಿನ್ಸ್ 11-06—10, ಮಿ॥ ಪಿ. ಎಸ್. ಅಚ್ಯುತರಾಯರವರು ಮೈಸೂರು ಸೀವೆಜ್ ಎಂಜಿನಿಯರಿಂಗ್ ಇನ್‌ಸ್ಪೆಕ್ಟರ್ ಜನರಲ್‌ರ ಆಫೀಸಿನ ಚಾರ್ಜನ್ನು 1906ನೆಯ ಇಸವಿ ಡಿಸೆಂಬರ್ 20ನೆ ತಾರೀಖಿನ ಪೂರ್ವಾಹ್ನದಲ್ಲಿ ತೆಗೆದು ಕೊಂಡರು.